ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1125 (1199)
2. ಸದಸ್ಯರ ಹೆಸರು : ಶ್ರೀ ಮುನಿರಾಜುಗೌಡ ಪಿ.ಎಂ.
   (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 22.09.2021
   (ಕಂದಾಯ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ)
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ನೈಸ್ ರಸ್ತೆಯ ನಿರ್ಮಾಣಕ್ಕೆ ರೈತರಿಂದ ಎಷ್ಟು ಎಕರೆ ಜಮೀನುಗಳನ್ನು ವಶಪಡಿಸಿಕೊಳ್ಳಲಾಗಿದೆ; (ವಿವರ ನೀಡುವುದು)	ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ ಅನುಷ್ಠಾನಕ್ಕಾಗಿ ಭೂಸ್ವಾಧೀನಪಡಿಸಿದ ಜಮೀನಿನ ವಿವರ ಈ ಕೆಳಕಂಡಂತಿದೆ:- ಕಲಂ | ವಿಸ್ತೀರ್ಣ(ಎ-ಗುಂ) ಪ್ರಾಥಮಿಕ ಅಧಿಸೂಚನೆ 3(1) | 29267-23 1(3) | 19414-1.50 28(1) | 18218-8.50 ಅಂತಿಮ ಅಧಿಸೂಚನೆ 28(4) | 4810-4.52
(ಆ)	ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 39ರಲ್ಲಿ ಎಷ್ಟು ಜಮೀನನ್ನು ವಶಪಡಿಸಿಕೊಳ್ಳಲಾಗಿದೆ; ಹಾಗೂ ಪರಿಹಾರವನ್ನು ನೀಡಲಾಗಿದೆ; (ಸರ್ವೆ ನಂಬರ್‌ಗಳೊಂದಿಗೆ	ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ ಅನುಷ್ಠಾನಕ್ಕಾಗಿ ಭೂಸ್ವಾಧೀನಪಡಿಸಿದ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ: 39ರ ಜಮೀನು ಸರ್ಕಾರಿ ಜಮೀನಾಗಿದ್ದು, ಸದರಿ ಸರ್ವೆ ನಂಬರ್ ಜಮೀನಿನಲ್ಲಿ 85-00 ಎಕರೆ ಜಮೀನಿಗೆ ದಿನಾಂಕ: 02.12.2002 ರಂದು

	ಸಂಪೂರ್ಣ ವಿವರವನ್ನು ನೀಡುವುದು)	ಕಲಂ 3(1)ರಂತೆ ಅಧಿಸೂಚನೆ ಹೊರಡಿಸಿದ್ದು, ತದನಂತರ ಆದೇಶ ಸಂಖ್ಯೆ: PWD/ 155/ CRM/ 95/ Govt., Land/ 99-2000, ದಿನಾಂಕ: 07.10.1999 ಹಾಗೂ ಸೇರ್ಪಡೆ ಆದೇಶ ಸಂಖ್ಯೆ: PWD /155/ CRM/ 95/ Govt., Land/ 2003, ದಿನಾಂಕ: 27.08.2003ನ್ನು ಅನುಸರಿಸಿ ಸರ್ವೆ ನಂ: 39ರಲ್ಲಿ 84 ಎಕರೆ 14 ಗುಂಟೆ ಜಮೀನನ್ನು ಕಂದಾಯ ಇಲಾಖೆಯು ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡಿದ್ದು, ತದನಂತರ ದಿನಾಂಕ: 22.11.2003ರಂದು ಸದರಿ ಜಮೀನನ್ನು ಯೋಜನೆ ಅನುಷ್ಠಾನಕ್ಕಾಗಿ ನೈಸ್ ಕಂಪನಿಗೆ ಹಸ್ತಾಂತರಿಸಲಾಗಿದೆ. ಈ ಜಮೀನು ಸರ್ಕಾರಿ ಜಮೀನಾಗಿರುವುದರಿಂದ, ಪರಿಹಾರ ಪಾವತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.
(ಇ)	ಸದರಿ ಗ್ರಾಮದಲ್ಲಿ ಹಲವರು ರೈತರ ಹೊಲಗಳಿಗೆ ರಸ್ತೆ ಸಂಪರ್ಕ ಕಡಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರೈತರ ಹೊಲಗಳಿಗೆ ರಸ್ತೆ ಸಂಪರ್ಕ ನೀಡಲು ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)	ನೈಸ್ ರಸ್ತೆಯನ್ನು ದಾಟಲು ಕಂಪನಿಯು ರಸ್ತೆ ಉದ್ದಕ್ಕೂ ಓವರ್ ಪಾಸ್ / ಅಂಡರ್ ಪಾಸ್ ನಿರ್ಮಿಸಿರುತ್ತದೆ.

ಸಂಖ್ಯೆ: ಸಿಐ 184 ಐಎಪಿ (ಇ) 2021

(ಮುರುಗೇಶ್ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು